# ಪ್ರಸ್ತುತ ಪ್ರತಿಯೊಬ್ಬ ಹಿಂದೂತ್ವವಾದಿಯು ಧರ್ಮಯೋಧನಾಗದೇ ಬೇರೆ ಪರ್ಯಾಯವಿಲ್ಲ !





## ಸಂಪಾದಕೀಯ

**ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ।। 4.7 ।।**
**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ।। 4.8 ।।**

**ಯಾವಾಗ ಯಾವಾಗ ಧರ್ಮಕ್ಕೆ ಗ್ಲಾನಿ ಬರುತ್ತದೆಯೋ ಮತ್ತು ಅಧರ್ಮಕ್ಕೆ ಬಲ ಸಿಗುತ್ತದೆಯೋ ಆಗ ನಾನು ಜನ್ಮತಾಳುತ್ತೇನೆ. ಸಾಧಕರ ರಕ್ಷಣೆಗಾಗಿ, ದುರ್ಜನರ ನಾಶಕ್ಕಾಗಿ ಮತ್ತು ಧರ್ಮಸಂಸ್ಥಾಪನೆಗಾಗಿ ನಾನು ಪ್ರತಿಯೊಂದು ಯುಗದಲ್ಲಿಯೂ ಮತ್ತೆ ಮತ್ತೆ ಅವತಾರ ತಾಳುತ್ತೇನೆ.**

## ವಿಜ್ಞಾನಿಗಳ ಸಕ್ರಿಯತೆ ಮತ್ತು ಸರಕಾರದ ನಿಷ್ಕ್ರಿಯತೆ

‘ಇಸ್ರೋ’ದ ವಿಜ್ಞಾನಿಗಳು ಶ್ರೀಹರಿಕೋಟಾದ ‘ಸತೀಶ ಧವನ ಬಾಹ್ಯಾಕಾಶ ಕೇಂದ್ರ’ದಿಂದ ನಡೆಸಿದ ಕಾರ್ಯಾಚರಣೆಯು ಜಗತ್ತನ್ನು ಬೆರಗುಗೊಳಿಸುವಂತಹದ್ದಾಗಿದೆ. ಬಾಹ್ಯಾಕಾಶಕ್ಕೆ ಏಕಕಾಲದಲ್ಲಿ ಹತ್ತು ಉಪಗ್ರಹಗಳನ್ನು ಹಾರಿಸಿದ ಹಿರಿಮೆ ‘ಇಸ್ರೋ’ದ ವಿಜ್ಞಾನಿಗಳ ಹೆಸರಿಗೆ ನೋಂದಾಯಿಸಲ್ಪಟ್ಟಿತು. ಇದಕ್ಕೂ ಮೊದಲು ರಶಿಯಾವು ಏಕಕಾಲದಲ್ಲಿ 8 ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಹಾರಿಸಿತ್ತು. ಭಾರತ ಅದಕ್ಕಿಂತಲೂ ಎರಡು ಹೆಜ್ಜೆ ಮುಂದೆ ಹೋಯಿತು. ಬಾಹ್ಯಾಕಾಶ ಸಂಶೋಧನೆ ಎಂದೊಡನೆ ಅಮೇರಿಕಾ, ರಶಿಯಾ, ಚೀನಾ ಮುಂತಾದ ಬಲಾಢ್ಯ ದೇಶಗಳ ಹೆಸರುಗಳು ನೆನಪಾಗುತ್ತವೆ. ಭಾರತೀಯ ವಿಜ್ಞಾನಿಗಳು ಇಂತಹ ಯಾವುದೇ ಬಲಾಢ್ಯ ರಾಷ್ಟ್ರಗಳ ಸಹಾಯ ಪಡೆಯದೇ ಕೇವಲ ಸ್ವಬಲದಿಂದ ಈ ಯಶಸ್ಸನ್ನು ಸಾಧಿಸಿದರು. ಇದರಿಂದ ಭಾರತವೂ ಈ ಬಲಾಢ್ಯ ರಾಷ್ಟ್ರಗಳ ಸಾಲಿನಲ್ಲಿ ತಲೆ ಎತ್ತಿ ನಿಲ್ಲುವಂತಾಯಿತು. ಈ ಯಶಸ್ಸಿನ ಸಂಪೂರ್ಣ ಕೀರ್ತಿ ವಿಜ್ಞಾನಿಗಳೇ ಸಲ್ಲುತ್ತದೆ. ಈ ಕ್ಷೇತ್ರದಲ್ಲಿ ರಾಜ್ಯಕರ್ತರಿಂದ ಯಾವುದೇ ಹಸ್ತಕ್ಷೇಪವಾಗಲಿಲ್ಲ. ನಮ್ಮ ಉಪಗ್ರಹವನ್ನು ಮೊದಲು ಬಿಡಬೇಕೆಂಬ ಅಧಿಕಾರಾರೂಢರ ಅಟ್ಟಹಾಸವಾಗಲೀ, ಓಟುಗಳ ಸ್ವಾರ್ಥೀ ಸಮೀಕರಣವಾಗಲೀ ಇರಲಿಲ್ಲ. ಭಾರತೀಯ ವಿಜ್ಞಾನಿಗಳು ಕೇವಲ ದೇಶಹಿತವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಧಾರೆಯೆರೆದು ಇಂತಹ ಮಹತ್ತರವಾದ ಯಶಸ್ಸನ್ನು ಪಡೆದರು. ಈ ಬಗ್ಗೆ ಖಂಡಿತವಾಗಿಯೂ ಎಲ್ಲ ಭಾರತೀಯರಿಗೆ ಅಭಿಮಾನವಿದೆ.

### ಬಾಹ್ಯಾಕಾಶ ಕಾರ್ಯಕ್ರಮಗಳತ್ತ ನಿರ್ಲಕ್ಷ್ಯ ಬೇಡ !

‘ಇಸ್ರೋ’ದ ವಿಜ್ಞಾನಿಗಳ ಈ ಅಭೂತಪೂರ್ವ ಕಾರ್ಯವನ್ನು ನೋಡಿ ಈ ಸಂಸ್ಥೆಯ ಮೇಲೆ ಸರಕಾರದ ವಿಶೇಷ ಗಮನವಿರಬಹುದು ಎಂಬ ತಪ್ಪುಕಲ್ಪನೆ ಕೆಲವರಲ್ಲಿ ಮೂಡಿರಬಹುದು. 2007 ರಲ್ಲಿ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ 860 ಕೋಟಿ ರೂಪಾಯಿಗಳ ಹೆಚ್ಚಳ ಲಭಿಸಿತು. ಅಮೇರಿಕಾ ಮತ್ತು ರಶಿಯಾದಂತಹ ದೇಶಗಳು ತಮ್ಮ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಮಾಡಿದ ಹೆಚ್ಚಳದ ತುಲನೆಯಲ್ಲಿ ಈ ಮೊತ್ತ ಅತ್ಯಲ್ಪವಾಗಿದೆ; ಆದರೂ ಭಾರತೀಯ ಸಂಶೋಧಕರು ಬಲಾಢ್ಯ ರಾಷ್ಟ್ರಗಳ ತುಲನೆಯಲ್ಲಿ ಈ ಸಾಹಸವನ್ನು ಮಾಡಿ ತೋರಿಸಿದರು. ಇದರ ಬಗ್ಗೆ ರಾಜ್ಯಕರ್ತರಿಗೆ ಅಭಿಮಾನವೆನಿಸಬೇಕು. ಆದರೆ ವಿಜ್ಞಾನಿಗಳನ್ನು ಸ್ತುತಿಸುವ ಬಾಯಿಮಾತಿನ ಸುಳ್ಳು ಪ್ರಶಂಸೆಯನ್ನು ವಿಜ್ಞಾನಿಗಳು ಬಯಸುವುದಿಲ್ಲ; ಆದರೆ ಅವರ ಕಲ್ಪನೆಗಳನ್ನು ಸಾಕಾರಗೊಳಿಸುವ ಪ್ರಯೋಗಗಳನ್ನು ಮಾಡಲು ಬೇಕಾಗುವ ಆರ್ಥಿಕ ಬಲವನ್ನು ಪೂರೈಸುವ ಕರ್ತವ್ಯವನ್ನು ರಾಜ್ಯಕರ್ತರು ಮಾಡಬೇಕು. ‘ಇಸ್ರೋ’ ಇಂದಿನವರೆಗೆ 50 ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಹಾರಿಸಿದೆ. ಈ ಉಪಗ್ರಹಗಳ ಆಧಾರದಲ್ಲಿ ಭಾರತ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ದಾಪುಗಾಲನ್ನು ಇಟ್ಟಿದೆ ಮತ್ತು ಅದನ್ನು ವಿಕಾಸದ ಒಂದು ಹಂತದವರೆಗೆ ತಲುಪಿಸಿದೆ. ಅಲ್ಲದೇ ‘ಇಸ್ರೋ’ವು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಹಿಂದುಳಿದ ದೇಶಗಳ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಹಾರಿಸಿ ಆರ್ಥಿಕ ಸಂಪಾದನೆಯನ್ನೂ ಮಾಡಿದೆ. ಸ್ವಲ್ಪದರಲ್ಲಿ ಹೇಳುವುದಾದರೆ ಜನತೆಯ ಹಣದಿಂದ ಆರಿಸಿ ಬರುವ ಶಾಸಕರು ಅಥವಾ ಮಂತ್ರಿಗಳಂತೆ ‘ಇಸ್ರೋ’ವು ಖಂಡಿತವಾಗಿಯೂ ದೇಶದ ಅರ್ಥವ್ಯವಸ್ಥೆಗೆ ಹೆಚ್ಚುವರಿ ಭಾರವಲ್ಲ. ‘ಇಸ್ರೋ’ ಜನಕಲ್ಯಾಣದ ಅನೇಕ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡಿದೆ. ಆದರೆ ಹಣದ ಅಭಾವದಿಂದಾಗಿ ವಿಜ್ಞಾನಿಗಳ ಕೈಗಳು ಕಟ್ಟಿದಂತಾಗಿವೆ. ಶಾಸಕರು-ಸಚಿವರು ತಮ್ಮ ವೇತನ ಮತ್ತು ಲಾಭ ಹೆಚ್ಚಾಗುವತ್ತ ಸತತ ಗಮನವನ್ನಿಟ್ಟಿರುತ್ತಾರೆ; ಹಾಗೆಯೇ ‘ಇಸ್ರೋ’ದಂತಹ ದೇಶವನ್ನು ಮುಂದೆ ಕೊಂಡೊಯ್ಯುವ ಸಂಸ್ಥೆಗಳಿಗೆ ನಿಧಿಯನ್ನು ಸುಲಭವಾಗಿ ಒದಗಿಸಿ ಕೊಡುವಲ್ಲಿ ಗಮನವನ್ನಿಡಬೇಕು.

### ಭಾರತ ರಕ್ಷಣಾ ತಂತ್ರಜ್ಞಾನದಲ್ಲಿ ಏಕೆ ಸ್ವಾವಲಂಬಿಯಾಗಿಲ್ಲ ?

‘ಇಸ್ರೋ’ದ ಈ ಕಾರ್ಯದಿಂದ ದೇಶ ದೊಡ್ಡ ಪ್ರಗತಿಯನ್ನು ಸಾಧಿಸಿತು, ಎಂಬ ಚಿತ್ರಣವನ್ನು ನಿರ್ಮಾಣ ಮಾಡಲಾಗುತ್ತಿದೆ. ರಕ್ಷಣೆಯಂತಹ ಮಹತ್ವದ ಕ್ಷೇತ್ರದಲ್ಲಿ ಭಾರತ ಪ್ರಗತಿ ಹೊಂದಿದ ರಾಷ್ಟ್ರಗಳ ತುಲನೆಯಲ್ಲಿ 50 ವರ್ಷಗಳಷ್ಟು ಹಿಂದೆ ಇದೆ. ಈ ಸತ್ಯವನ್ನು ನಿರಾಕರಿಸುವಂತಿಲ್ಲ. ಇಂದಿಗೂ ನಾವು ಅಮೇರಿಕಾ ಮತ್ತು ರಶಿಯಾದಂತಹ ದೇಶಗಳು ಉಪಯೋಗಿಸಿ ಬಿಟ್ಟಂತಹ ಅಣುಶಕ್ತಿಯುಳ್ಳ ಜಲಾಂತರ್ಗಾಮಿ ಹಡಗುಗಳನ್ನು ಖರೀದಿಸುತ್ತೇವೆ; ಯುದ್ಧದ ವಿಮಾನಗಳು, ರಡಾರ್ ಯಂತ್ರಗಳು, ರಣಗಾಡಿಗಳು, ಬುಲೆಟ್ ಪ್ರೂಫ್ ಜಾಕೀಟುಗಳು, ಹಿಮಚ್ಛಾದಿತ ಪ್ರದೇಶಗಳಲ್ಲಿ ಉಪಯೋಗಿಸುವಂತಹ ಬೂಟು ಮತ್ತು ಬಟ್ಟೆಗಳು ಮುಂತಾದ ರಕ್ಷಣಾಕೇತ್ರದ ಅನೇಕ ವಿಷಯಗಳಿಗಾಗಿ ನಾವು ವಿದೇಶಿಯರನ್ನು ಅವಲಂಬಿಸಿದ್ದೇವೆ. ಯಾವ ದೇಶ ಒಂದೇ ಸಲಕ್ಕೆ ಹತ್ತು ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಹಾರಿಸುವ ತಂತ್ರಜ್ಞಾನವನ್ನು ವಿಕಸಿತಗೊಳಿಸಿತೋ ಅಂತಹ ದೇಶವು ಯುದ್ಧದ ವಿಮಾನಗಳು, ಜಲಾಂತರ್ಗಾಮಿ ಹಡಗುಗಳು, ರಣಗಾಡಿಗಳನ್ನು ತಯಾರಿಸುವಂತಹ ತಂತ್ರಜ್ಞಾನವನ್ನು ಏಕೆ ವಿಕಸಿತಗೊಳಿಸಲಿಲ್ಲ ? ಇದನ್ನು ಸಾಧಿಸಲು ಭಾರತೀಯ ವಿಜ್ಞಾನಿಗಳು ಮತ್ತು ತಂತ್ರಜ್ಞರು ಹಿಂದುಳಿದಿದ್ದಾರೇನು ? ಇಲ್ಲವೇ ಇಲ್ಲ. ಅಮೇರಿಕಾದ ಜಗತ್ಪ್ರಸಿದ್ಧ ‘ನಾಸಾ’ ಸಂಶೋಧನಾ ಸಂಸ್ಥೆಯಲ್ಲಿಯೂ ಭಾರತೀಯ ವಿಜ್ಞಾನಿಗಳು ಬಹಳ ಸಂಖ್ಯೆಯಲ್ಲಿದ್ದಾರೆ, ಇದಕ್ಕೆ ಕಾರಣ ಅವರ ಅತ್ಯುನ್ನತ ಬುದ್ಧಿಮತ್ತೆ ಅಲ್ಲವೇ ? ರಕ್ಷಣಾಕ್ಷೇತ್ರದಲ್ಲಿ ಭಾರತ ಹಿಂದುಳಿಯಲು ರಾಜ್ಯಕರ್ತರ ಇಚ್ಛಾಶಕ್ತಿಯ ಕೊರತೆಯೇ ಕಾರಣವಾಗಿದೆ. ರಕ್ಷಣಾಕ್ಷೇತ್ರದಲ್ಲಿ ಭಾರತ ಸ್ವಾವಲಂಬಿಯಾದರೆ ಯುದ್ಧದ ವಿಮಾನಗಳು, ಯುದ್ಧದ ನೌಕೆಗಳು, ಶಸ್ತ್ರಾಸ್ತ್ರಗಳು ಮುಂತಾದವುಗಳ ಖರೀದಿಯಿಂದ ಸಿಗುವ ಕೋಟ್ಯಂತರ ರೂಪಾಯಿಗಳ ದಲ್ಲಾಳಿ ಹಣ ತಮಗೆ ಸಿಗಲಾರದು ಎಂಬುದು ರಾಜ್ಯಕರ್ತರಿಗೆ ಸರಿಯಾಗಿ ಗೊತ್ತಿದೆ. ಆದುದರಿಂದ ಅವರು ರಕ್ಷಣಾಕ್ಷೇತ್ರವನ್ನು ಉದ್ದೇಶಪೂರ್ವಕವಾಗಿಯೇ ಹಿಂದಿಟ್ಟಿದ್ದಾರೆ. ಕೇವಲ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಮಾತ್ರವಲ್ಲದೇ ರಕ್ಷಣೆ ಸಹಿತ ಇತರ ಎಲ್ಲ ಕ್ಷೇತ್ರಗಳಲ್ಲಿಯೂ ಭಾರತ ಪ್ರಗತಿ ಹೊಂದಿದ ರಾಷ್ಟ್ರಗಳಿಗೆ ಸರಿಸಮಾನವಾಗಿ ನಿಂತರೆ ಮಾತ್ರ ಪ್ರಗತಿಯು ಕಂಡುಬರುವುದು. ಅಲ್ಲಿಯವರೆಗೆ ಪ್ರಗತಿಯ ಬಗ್ಗೆ ತನ್ನನ್ನು ತಾನು ಹೊಗಳುವುದೆಂದರೆ ತನ್ನ ಕಣ್ಣಿಗೆ ತಾನೇ ಮಣ್ಣೆರೆಚಿಕೊಂಡಂತೆ !

---

## ಓರ್ವ ಮುಸಲ್ಮಾನನು ಹಿಂದೂ ಯುವತಿಯನ್ನು ಚುಡಾಯಿಸಿದ ಪ್ರಕರಣ !

# ಪೊಲೀಸರಲ್ಲಿ ದೂರು ದಾಖಲಿಸಲು ಪ್ರಯತ್ನಿಸಿದಾಗ ಶಸ್ತ್ರಸಜ್ಜಿತ ಮುಸಲ್ಮಾನರಿಂದ ದಂಗೆ !

ಮಹಾರಾಷ್ಟ್ರದ ಪರಳಿ ಎಂಬಲ್ಲಿ ಓರ್ವ ಮುಸಲ್ಮಾನನು ಓರ್ವ ಹಿಂದೂ ಯುವತಿಯನ್ನು ಚುಡಾಯಿಸಿದನು ಮತ್ತು ಆಮೇಲೆ ಅವಳ ಕೈಯನ್ನು ಹಿಡಿದನು. ಆಗ ಅಲ್ಲಿ ಉಪಸ್ಥಿತರಿದ್ದ ಆ ಯುವತಿಯ ಇಬ್ಬರು ಸಂಬಂಧಿಕರು ಆ ಮುಸಲ್ಮಾನನನ್ನು ಹಿಡಿದರು. ಈ ವಿಷಯವು ಕೂಡಲೇ ಇತರ ಮುಸಲ್ಮಾನರಿಗೆ ತಿಳಿಯಿತು. ಆ ಯುವತಿಯ ಸಂಬಂಧಿಕರು ಆ ಮುಸಲ್ಮಾನನನ್ನು ಪೊಲೀಸರಿಗೊಪ್ಪಿಸಲು ಕೊಂಡೊಯ್ಯುತ್ತಿರುವಾಗ ಖಡ್ಗಗಳನ್ನು ಝಳಪಿಸುತ್ತಾ ಬಂದ ಮುಸಲ್ಮಾನರು ಅವರನ್ನು ತಡೆದರು ಮತ್ತು ‘ಅಲ್ಲಾ ಹೋ ಅಕ್ಬರ್’ ಎಂದು ಘೋಷಣೆ ಕೂಗುತ್ತಾ ಅವರ ಮೇಲೆ ಹಾಗೂ ಅಲ್ಲಿನ ಅಕ್ಕಪಕ್ಕದ ಪೇಟೆಯಲ್ಲಿ ಹಲ್ಲೆ ನಡೆಸಿ ಭಯದ ವಾತಾವರಣವನ್ನು ನಿರ್ಮಿಸಿದರು. **(ಹಿಂದೂಗಳ ಮನೆಗಳಲ್ಲಿ ಖಡ್ಗಗಳಿರುವುದಿಲ್ಲ. ಹಾಗಾದರೆ ಮುಸಲ್ಮಾನರಲ್ಲಿ ಖಡ್ಗಗಳು ಎಲ್ಲಿಂದ ಬಂದವು ? ರಾಷ್ಟ್ರ ಹಾಗೂ ಧರ್ಮಕ್ಕಾಗಿ ಕಾರ್ಯವನ್ನು ಮಾಡುವ ಸನಾತನದಂತಹ ಚಿಕ್ಕ ಸಂಸ್ಥೆಗಳ ವಿಚಾರಣೆಯನ್ನು ಆರಂಭಿಸುವ ಪೊಲೀಸರು ಮೊದಲು ಮುಸಲ್ಮಾನರ ಮನೆಗಳನ್ನು ತಪಾಸಣೆ ಮಾಡಬೇಕು. ಇದರಿಂದ ದೇಶಕ್ಕಾದರೂ ಲಾಭವಾದೀತು ! - ಸಂಪಾದಕರು)** ಈ ಸಮಯದಲ್ಲಿ ಮುಸಲ್ಮಾನರು ಹಿಂದೂ ವ್ಯಾಪಾರಿಗಳ, ನಾಗರಿಕರ ಅಲ್ಲದೇ ಹಿಂದೂ ಮಹಿಳೆಯರ ಮೇಲೆಯೂ ಹಲ್ಲೆಯನ್ನು ನಡೆಸಿದರು. ದಿನವಿಡೀ ಸುಡುಬಿಸಿಲು ಇದ್ದುದರಿಂದ ರಾತ್ರಿ ಪೇಟೆಯಲ್ಲಿ ಜನದಟ್ಟಣೆ ಇತ್ತು. ಹಾಗಾಗಿ ಸಶಸ್ತ್ರ ಹಲ್ಲೆಕೋರರ ಭೀತಿಯಿಂದಾಗಿ ಜನರು ಚೆಲ್ಲಾಪಿಲ್ಲಿಯಾಗಿ ಓಡತೊಡಗಿದರು. **(ಮುಸಲ್ಮಾನರಿಗೆ ಹೆದರಿ ಚೆಲ್ಲಾಪಿಲ್ಲಿಯಾಗಿ ಓಡುವ ಹಿಂದೂಗಳಿಂದ ಅವರಿಗಾಗಲೀ, ಸಮಾಜಕ್ಕಾಗಲೀ, ರಾಷ್ಟ್ರಕ್ಕಾಗಲೀ ಏನೂ ಪ್ರಯೋಜನವಿಲ್ಲ ! ಇಷ್ಟು ಮಂದಿ ಹಿಂದೂಗಳಿದ್ದರೂ ಧರ್ಮಾಂಧ ಮುಸಲ್ಮಾನರ ಮೇಲೆ ಏಕೆ ಸಿಡಿದೇಳಲಿಲ್ಲ ? ಪ್ರತಿಯೊಬ್ಬರೂ ಒಂದೊಂದು ಕಲ್ಲುಗಳನ್ನಾದರೂ ಎಸೆದಿದ್ದರೆ ಹಲ್ಲೆಕೋರರು ಹೆದರಿ ಪಲಾಯನ ಮಾಡುತ್ತಿದ್ದರು ! - ಸಂಪಾದಕರು)** ಅನಂತರ ಅಲ್ಲಿದ್ದ ಶಿವಸೇನೆಯ ಶ್ರೀ. ವೈಜನಾಥ ಸುರವಸೆ ಮತ್ತು ಶ್ರೀ. ರಾಜಾಭಾವೂ ದಹಿವಾಳರ ಮೇಲೆಯೂ ಮುಸಲ್ಮಾನರು ಖಡ್ಗದಿಂದ ಹಲ್ಲೆ ನಡೆಸಿದರು. **(ಹಿಂದೂಗಳೆ, ಮುಸಲ್ಮಾನರು ಇಷ್ಟೊಂದು ಜನದಟ್ಟಣೆಯಲ್ಲಿಯೂ ಹಿಂದೂತ್ವವಾದಿಗಳನ್ನು ಗುರುತಿಸಿ ಪ್ರಾಣಘಾತಕ ಹಲ್ಲೆ ನಡೆಸುತ್ತಾರೆ. ಇದು ದಂಗೆಯಲ್ಲ, ಮುಸಲ್ಮಾನರು ಹಿಂದೂಗಳ ವಿರುದ್ಧ ಸಾರಿದ ಯುದ್ಧವೇ ಆಗಿದೆ. ಈಗ ಪ್ರತಿಯೊಬ್ಬ ಹಿಂದೂತ್ವವಾದಿಯು ಧರ್ಮಯೋಧನಾಗದೇ ಬೇರೆ ಪರ್ಯಾಯವಿಲ್ಲ. - ಸಂಪಾದಕರು)** ಈ ಹಲ್ಲೆಯಲ್ಲಿ ಅವರಿಬ್ಬರೂ ಗಂಭೀರವಾಗಿ ಗಾಯಗೊಂಡರು. ಈ ಬಗ್ಗೆ ಶಿವಸೇನೆಯ ತಾಲೂಕುಪ್ರಮುಖ ಶ್ರೀ. ವೈಜನಾಥ ಸಾಳುಂಖೆಯವರಿಗೆ ಮಾಹಿತಿ ಸಿಗುತ್ತಲೇ ಅವರು ತಮ್ಮ ಕಾರ್ಯಕರ್ತರೊಂದಿಗೆ ಘಟನಾಸ್ಥಳಕ್ಕೆ ತಲುಪಿದರು ಮತ್ತು ಅವರು ಮುಸಲ್ಮಾನರನ್ನು ಓಡಿಸಿದರು. ಈ ಸಮಯದಲ್ಲಿ ಒತ್ತಡಗ್ರಸ್ಥ ವಾತಾವರಣ ನಿರ್ಮಾಣವಾಯಿತು. ಅನಂತರ ಪೊಲೀಸರು ಅಲ್ಲಿಗೆ ಹೆಚ್ಚುವರಿ ಪೊಲೀಸರನ್ನು ಕರೆಯಿಸಿಕೊಂಡರು ಮತ್ತು ರಾತ್ರಿ ಗಸ್ತು ಹಾಕಿದರು; ಆದರೆ ತಡರಾತ್ರಿಯವರೆಗೆ ಯಾರನ್ನೂ ಬಂಧಿಸಿರಲಿಲ್ಲ. **(ಹೇಗೆ ಬಂಧಿಸುವರು ! ದಂಗೆಕೋರರು ಮುಸಲ್ಮಾನರಾಗಿದ್ದರಲ್ಲವೇ ! ಹಿಂದೂಗಳೆ ಇಂತಹ ಧರ್ಮದ್ರೋಹಿ ಪೊಲೀಸು ವ್ಯವಸ್ಥೆಯನ್ನು ನೀವು ಬೆವರು ಸುರಿಸಿ ಪೋಷಿಸುತ್ತಿದ್ದೀರಿ. ಇದರ ಬಗ್ಗೆ ನಿಮಗೆ ಎಂದಾದರೂ ಖೇದವೆನಿಸಿದೆಯೇನು ? - ಸಂಪಾದಕರು)** ಇದರ ಬಗ್ಗೆ ಅಲ್ಲಿನ ಪೊಲೀಸು ಅಧೀಕ್ಷಕ ಶ್ರೀ. ಸುಹಾಸ ವಾರಕೆಯವರು ಈ ಪ್ರಕರಣ ತಪ್ಪುತಿಳುವಳಿಕೆಯಿಂದ ಆಗಿದೆ

> ಹಿಂದೂಗಳೇ ಮುಸಲ್ಮಾನರು ನಿಮ್ಮ ಹಬ್ಬಹರಿದಿನಗಳಂದು ಮತ್ತು ನಿತ್ಯವೂ ನಿಮ್ಮ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಚಿಕ್ಕಪುಟ್ಟ ಹಲ್ಲೆಗಳನ್ನು ನಡೆಸಿ ನಿಮ್ಮಲ್ಲಿ ಎಷ್ಟು ಸಾಮರ್ಥ್ಯವಿದೆ ಮತ್ತು ನೀವು ಎಲ್ಲಿಯ ತನಕ ಪ್ರತೀಕಾರ ಮಾಡಬಲ್ಲಿರಿ ಎಂಬುದನ್ನು ಅಂದಾಜು ಮಾಡುತ್ತಿದ್ದಾರೆ. ಈ ಧರ್ಮಾಂಧರಿಗೆ ಇಂದೇ ನಿಮ್ಮ ಸಾಮರ್ಥ್ಯವನ್ನು ತೋರಿಸದಿದ್ದರೆ ಅವರು ಬೇಗನೇ ನಿರ್ಣಾಯಕ ಹಲ್ಲೆಯನ್ನು ನಡೆಸಿ ರಾಷ್ಟ್ರದಾದ್ಯಂತ ಕಾಶ್ಮೀರದಂತಹ ಸ್ಥಿತಿಯನ್ನು ತರುವರು.

ಎಂದು ಹೇಳಿದ್ದಾರೆ. **(ಇದನ್ನು ಓದಿ ಯಾರ ರಕ್ತವು ಕುದಿಯುವುದಿಲ್ಲವೋ ಅವರು ಹಿಂದೂಗಳೇ ಅಲ್ಲ ! ಪೊಲೀಸು ಅಧೀಕ್ಷಕರು ಯಾವ ತಪ್ಪು ತಿಳುವಳಿಕೆಯ ಬಗ್ಗೆ ಬಡಬಡಿಸುತ್ತಿದ್ದಾರೆ ? ಹಿಂದೂ ಯುವತಿಯ ಕೈಯನ್ನು ಹಿಡಿದ ಮುಸಲ್ಮಾನನಿಗೆ ಆಕೆ ಮುಸಲ್ಮಾನ ಯುವತಿಯಾಗಿದ್ದಳೆಂಬ ತಪ್ಪು ತಿಳುವಳಿಕೆಯಾಗಿತ್ತೇನು ? ಹಿಂದೂತ್ವವಾದಿಗಳ ಮೇಲೆ ಪ್ರಾಣಘಾತಕ ಹಲ್ಲೆ ಮಾಡುವಾಗ ಅವರು ಮುಸಲ್ಮಾನರು ಎಂದು ಮುಸಲ್ಮಾನ ಹಲ್ಲೆಕೋರರಿಗೆ ತಪ್ಪುತಿಳುವಳಿಕೆಯಾಗಿತ್ತೇನು ? ಹಿಂದೂಗಳು ಎಂದೂ ಪೊಲೀಸರನ್ನು ಜೀವಂತವಾಗಿ ಸುಡುವ ಮುಸಲ್ಮಾನರ ಭಾಷೆಯಲ್ಲಿ ಮಾತನಾಡುವುದಿಲ್ಲ. ಹಾಗಾಗಿ ಹಿಂದೂಗಳು ಇಂತಹ ಉತ್ತರಗಳನ್ನು ಕೇಳಬೇಕಾಗಿದೆ. - ಸಂಪಾದಕರು)** ಅನಂತರ ಶಿವಸೇನೆಯ ಜಿಲ್ಲಾಪ್ರಮುಖ ಶ್ರೀ. ಬಾಳಾ ಸಾಹೇಬ ಪಿಂಗಳೆ ಮತ್ತು ಶ್ರೀ. ಅನಿಲ ಜಗತಾಪ ಇವರು ಪೊಲೀಸರನ್ನು ಭೇಟಿಯಾಗಿ ಹಿಂದೂ ವ್ಯಾಪಾರಿಗಳ ಮತ್ತು ಮಹಿಳೆಯರ ಮೇಲೆ ಹಲ್ಲೆ ಮಾಡಿದ ಗೂಂಡಾಗಳನ್ನು ಬಂಧಿಸದೇ ಇದ್ದಲ್ಲಿ ಶಿವಸೇನೆಯು ರಸ್ತೆಗಿಳಿಯುವುದು ಎಂಬ ಎಚ್ಚರಿಕೆಯನ್ನು ನೀಡಿದರು. ಈ ಘಟನೆಯಾದ ಮರುದಿನ ಈ ಹಲ್ಲೆಕೋರರಲ್ಲಿನ 17 ಜನರನ್ನು ಪೊಲೀಸರು ಬಂಧಿಸಿದರು. **(ಈ ಘಟನೆ ಶನಿವಾರ ಘಟಿಸಿದ್ದರೂ ಹಲ್ಲೆಕೋರರನ್ನು ಬಂಧಿಸಲು ರವಿವಾರದ ಮುಹೂರ್ತವನ್ನೇಕೆ ನಿಗದಿಪಡಿಸಲಾಯಿತು ? ಹಲ್ಲೆಕೋರರು ಮುಸಲ್ಮಾನರೆಂದೇನು ? - ಸಂಪಾದಕರು)**

---

### ಮುಸಲ್ಮಾನರು ಶಿಕ್ಷಣಕ್ಷೇತ್ರದಲ್ಲಿ ತುಂಬಾ ಹಿಂದೆ ಇದ್ದಾರೆ ಅದಕ್ಕಾಗಿ ಅವರು ಭಯೋತ್ಪಾದನೆಯ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದು ಹೇಳುವ ಜಾತ್ಯತೀತ ಕಾಂಗ್ರೆಸ್‌ಗೆ ‘ಇಂಜಿನಿಯರ್’ ಪದವೀಧರ ಮುಸಲ್ಮಾನ ಭಯೋತ್ಪಾದಕನಿಂದ ಕಪಾಳಮೋಕ್ಷ !

ಭಯೋತ್ಪಾದಕರೊಂದಿಗೆ ಸಂಬಂಧವಿರುವ ಸಂಶಯದ ಮೇಲೆ ದಿನಾಂಕ 21.2.2008 ರ ರಾತ್ರಿ ಒಬ್ಬ ಸಂಗಣಕತಜ್ಞ (ಸಾಫ್ಟವೇರ್)ನನ್ನು ಬೆಂಗಳೂರಿನಲ್ಲಿ ಬಂಧಿಸಲಾಯಿತು. ಪೋಲಿಸರು ಅವನ ವಿಚಾರಣೆ ನಡೆಸಿದಾಗ ಆ ವ್ಯಕ್ತಿಯು ನಿಷೇಧಿಸಲ್ಪಟ್ಟಿರುವ ‘ಸಿಮಿ’ ಎಂಬ ಭಯೋತ್ಪಾದಕ ತಂಡದ ಮುಖ್ಯ ಕಾರ್ಯಕರ್ತನಾಗಿದ್ದಾನೆ ಎಂಬುದು ತಿಳಿದು ಬಂದಿತು.